ಚುಟುಕು ಸುದ್ದಿ

ಶಾಲೆಯಲ್ಲಿ ಬೆಂಕಿ ತಗಲಿ ವಿದ್ಯಾರ್ಥಿಗೆ ಗಾಯ

ಬಂಟ್ವಾಳ: ತಾಲೂಕಿನ ಶಂಭೂರು ಸರಕಾರಿ ಪ್ರೌಢ ಶಾಲೆಯ ಆವರಣದಲ್ಲಿ ಕಸವನ್ನು ಹೊತ್ತಿಸುವ ವೇಳೆ ವಿದ್ಯಾರ್ಥಿಗೆ ಬೆಂಕಿ ತಗುಲಿ ಗಂಭೀರ ಗಾಯಗೊಂಡಿದ್ದಾರೆ.

ಮಂಗಳೂರಿನ ಖಾಸಗಿ ಆಸ್ಪತ್ರೆಯ ತುರ್ತು ಚಿಕಿತ್ಸಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿರುವ ಶಾಲಾ ಬಾಲಕನನ್ನು ಬಂಟ್ವಾಳ ಶಾಸಕ ರಾಜೇಶ್ ನಾಯ್ಕ್ ಅವರು ಆಸ್ಪತ್ರೆಯಲ್ಲಿ ಭೇಟಿಯಾಗಿ ಆರೋಗ್ಯ ವಿಚಾರಿಸಿ ಧೈರ್ಯ ತುಂಬಿದ್ದಾರೆ.

ಈ ಸಂದರ್ಭ ಶಾಸಕರು ತಮ್ಮ ವಯಕ್ತಿಕ ನೆಲೆಯಲ್ಲಿ ಧನಸಹಾಯವಿತ್ತು ನೆರವು ನೀಡಿದಲ್ಲದೆ ಗಾಯಾಳು ಬಾಲಕ ಹಾಗೂ ಕುಟುಂಬಕ್ಕು ಧೈರ್ಯ ತುಂಬಿದ್ದಾರೆ. ಬಂಟ್ವಾಳ ಕ್ಷೇತ್ರ ಬಿಜೆಪಿ ಅಧ್ಯಕ್ಷ ದೇವಪ್ಪ ಪೂಜಾರಿ ಶಾಸಕರ ಜೊತೆಗಿದ್ದರು. ಮಂಗಳವಾರ ನರಿಕೊಂಬು ಗ್ರಾ.ಪಂ. ಅಧ್ಯಕ್ಷ ಸಂತೋಷ್ ಕುಮಾರ್ ಅವರು ಕೂಡ ಭೇಟಿ ನೀಡಿ ಗಾಯಾಳು ಬಾಲಕನಿಗೆ ಧೈರ್ಯ ತುಂಬಿ, ಘಟನೆಯ ಮಾಹಿತಿ ಪಡೆದಿದ್ದಾರೆ.ಘಟನೆಯ ಬಗ್ಗೆ ಬಂಟ್ವಾಳ ಕ್ಷೇತ್ರ ಶಿಕ್ಷಣಾಧಿಕಾರಿಯವರು ನಿರ್ಲಕ್ಷ್ಯ ವಹಿಸಿದ್ದಾರೆಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಪ್ರಶಸ್ತಿಗೆ ಆಯ್ಕೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ಅಸಾಧಾರಣ ಪ್ರತಿಭಾ ಪುರಸ್ಕಾರ ಪ್ರಶಸ್ತಿಗೆ ಆಶಿಶ್ ಎಂ.ರಾವ್ ಆಯ್ಕೆಯಾಗಿದ್ದಾರೆ.

ರಾಜ್ಯ ಸರ್ಕಾರದ ವತಿಯಿಂದ ಮಕ್ಕಳ ಮತ್ತು ಮಹಿಳಾ ಕಲ್ಯಾಣ ಅಭಿವೃದ್ಧಿ ಇಲಾಖೆ ನೀಡುವ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ 2023–24ನೇ ಸಾಲಿನ ಕಲೆ ಸಾಂಸ್ಕೃತಿಕ ಸಂಗೀತ ಕ್ಷೇತ್ರಗಳ ಸಾಧನೆ ಗುರಿತಿಸಿ ಆಯ್ಕೆಮಾಡಲಾಗಿದೆ.

ಇವರು ಮಂಗಳೂರಿನ ಕೊಡಿಯಲ್ ಬೈಲಿನ ಶಾರದಾ ಪ್ರಿ ಯೂನಿವರ್ಸಿಟಿ ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿಯಾಗಿದ್ದು, ಮಧುಸೂಧನ ಹಾಗೂ ರಾಜಶ್ರೀ ದಂಪತಿಯ ಪುತ್ರ.

ಜಾಗೃತಿ ರಥಕ್ಕೆ ಚಾಲನೆ

ಮಂಗಳೂರು: ನಗರದ ಶರಬತ್ ಕಟ್ಟೆಯಲ್ಲಿರುವ ಕಾರ್ಮಿಕ ಭವನದಲ್ಲಿ ಜನಜಾಗೃತಿ ರಥಕ್ಕೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸದಸ್ಯ ಕಾರ್ಯದರ್ಶಿ ಶೋಭಾ ಬಿ.ಜಿ ಚಾಲನೆ ನೀಡಿದರು

ಮಂಗಳೂರು ವಿಭಾಗದ ಸಹಾಯಕ ಕಾರ್ಮಿಕ ಆಯುಕ್ತ ಶಿವಕುಮಾರ್ ಬಿ. ಇ. ಅಧ್ಯಕ್ಷತೆ ವಹಿಸಿದ್ದರು. ಕಾರ್ಮಿಕ ಅಧಿಕಾರಿ ಕಾವೇರಿ ಟಿ., ವಿಲ್ಮಾ ಎಲಿಜಬೆತ್ ತೌವ್ರೋ ಮತ್ತು ಯೋಜನಾ ನಿರ್ದೇಶಕ ಶ್ರೀನಿವಾಸ್ ನಾಯಕ್ ಉಪಸ್ಥಿತರಿದ್ದರು.

ಜನಜಾಗೃತಿ ರಥವು ದಕ್ಷಿಣ ಕನ್ನಡ ಜಿಲ್ಲಾಯಾದ್ಯಂತ ಮಾ.6 ರಿಂದ 11 ರವರೆಗೆ ಸಂಚರಿಸಲಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯದವರು ವಾಸಿಸುವ ಕಾಲೋನಿಗಳಲ್ಲಿ ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ಕಾಯ್ದೆ ಹಾಗೂ ಮಾನವ ಕಳ್ಳ ಸಾಗಣಿಕೆ ತಡೆ ಕಾಯ್ದೆಯ ಬಗ್ಗೆ ಜನಜಾಗೃತಿ ಮೂಡಿಸಲು ಈ ಕಾರ್ಯಕ್ರಮ ಆಯೋಜಿಸಲಾಗಿರುವುದಾಗಿ ಸಹಾಯಕ ಕಾರ್ಮಿಕ ಆಯುಕ್ತರು ತಿಳಿಸಿದ್ದಾರೆ.

ಆತ್ಮ ವಿಶ್ವಾಸ ವೃದ್ಧಿಗೆ ಯಕ್ಷ ಶಿಕ್ಷಣ ಬುನಾದಿ

ಮಾ. 26ಕ್ಕೆ ಯಕ್ಷಧ್ರುವ ಪಟ್ಲ ಸಂಭ್ರಮ | 15 ಮಂದಿ ಕಲಾವಿದರಿಗೆ ಗೌರವ | ಭರದ ಸಿದ್ಧತೆ

ಸಂ.ಕ. ಸಮಾಚಾರ, ಮಂಗಳೂರು

ಯಕ್ಷಧ್ರುವ ಯಕ್ಷ ಶಿಕ್ಷಣದ ಮೂಲಕ ವಿದ್ಯಾರ್ಥಿಗಳಲ್ಲಿ ಆತ್ಮ ವಿಶ್ವಾಸ ಮೂಡಿದೆ. ಮೂಡಬಿದ್ರೆಯ ಆಳ್ವಾಸ್ ಆವರಣದಲ್ಲಿ ನಡೆದ ಯಕ್ಷ ಶಿಕ್ಷಣದಲ್ಲಿ ಸುಮಾರು ನಾಲ್ಕು ಸಾವಿರ ವಿದ್ಯಾರ್ಥಿಗಳು ಯಕ್ಷಗಾನ ಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು ಎಂದು ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್‌ನ ಸ್ಥಾಪಕಾಧ್ಯಕ್ಷ ಪಟ್ಲ ಸತೀಶ್ ಶೆಟ್ಟಿ ತಿಳಿಸಿದರು.

ಬಲ್ಲಾಲ್‌ಬಾಗ್‌ನಲ್ಲಿರುವ ಪತ್ತುಮುಡಿ ಸೌಧದಲ್ಲಿ ನಡೆದ ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್‌ನ 'ಯಕ್ಷಧ್ರುವ ಪಟ್ಲ ಸಂಭ್ರಮ–2024' ಮೇ.26 ರಂದು ಜರುಗಿಸುವುದೆಂದು ತೀರ್ಮಾನಿಸಲಾಗಿ ಆ ದಿನದ ಕಾರ್ಯಕ್ರಮಗಳ ಬಗ್ಗೆ ಕರೆದಿರುವ ಸಭೆಯಲ್ಲಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದರು. 2024ನೇ ಸಾಲಿನ ಪಟ್ಲ ಪ್ರಶಸ್ತಿಯನ್ನು ಬಡಗುತಿಟ್ಟಿನ ಸುಪ್ರಸಿದ್ಧ ಹಿರಿಯ ಕಲಾವಿದ ಕೊಂಡದಗುಳಿ ರಾಮಚಂದ್ರ ಹೆಗ್ಗಡೆ ಅವರಿಗೆ ನೀಡಲಾಗುವುದು. ಪಟ್ಲ ಸಂಭ್ರಮದಲ್ಲಿ ಪಟ್ಲ ಫೌಂಡೇಶನ್‌ನ ಮಹಾಪೋಷಕರು, ಮಹಾದಾನಿಗಳು ಉದ್ಯಮಿ ಬರೋಡಾ ಶಶಿಧರ ಶೆಟ್ಟಿ ದಂಪತಿಗಳನ್ನು ವಿಶೇಷವಾಗಿ ಸನ್ಮಾನಿಸಲಾಗುವುದು. ಯಕ್ಷಧ್ರುವ ಕಲಾ ಗೌರವವನ್ನು ಯಕ್ಷಗಾನ ಮಾತ್ರವಲ್ಲದೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 15 ಮಂದಿ ಸಾಧಕರನ್ನು ಗುರುತಿಸಿ ನೀಡಲಾಗುವುದು ಎಂದು ಪಟ್ಲ ಸತೀಶ್ ಶೆಟ್ಟಿ ತಿಳಿಸಿದರು. ಯುರೋಪ್ ರಾಷ್ಟ್ರದಲ್ಲೂ ಈ ವರ್ಷ ಪಟ್ಲ ಫೌಂಡೇಶನ್ ಟ್ರಸ್ಟ್‌ನ ಘಟಕ ರಚನೆಯಾಗಲಿದೆ ಎಂದು ಪಟ್ಲ ಸತೀಶ್ ಶೆಟ್ಟಿ ತಿಳಿಸಿದರು. ಯಕ್ಷಗಾನ ತಾಳಮದ್ದಲೆಯ ಅರ್ಥಧಾರಿ ಉಜಿರೆ ಅಶೋಕ ಭಟ್ ಮಾತನಾಡಿ,ಯಕ್ಷ ಶಿಕ್ಷಣದ ಮೂಲಕ ನಾಲ್ಕು ಸಾವಿರ ಮಕ್ಕಳಿಗೆ ಯಕ್ಷ ಕಲೆಯ ಪರಿಚಯವಾಗಿದೆ ಎಂದು ತಿಳಿಸಿದರು. ಸಭೆಯಲ್ಲಿ ಮಂದಾರ್ತಿ ದುರ್ಗಾಪರಮೇಶ್ವರಿ ದೇವಸ್ಥಾನದ ಮಾಜಿ ಟ್ರಸ್ಟಿ ಶೇಡಿಕೋಡ್ಲು ವಿಠಲ ಶೆಟ್ಟಿ ಅವರು ಫೌಂಡೇಶನ್ ಕೇವಲ ಕಲಾವಿದರ ಕಾಮಧೇನು ಮಾತ್ರವಲ್ಲ. ಯಕ್ಷಗಾನವನ್ನು ಕಲಿಸಿ ಉಳಿಸಿ ಬೆಳೆಸುವಂತಹ ಮಹತ್ಕಾರ್ಯ ಮಾಡುತ್ತಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪೂಂಜಾಲಕಟ್ಟೆ ಘಟಕದಿಂದ ಯಶಸ್ವಿಯಾಗಿ ಜರುಗಿದ ವಾರ್ಷಿಕೋತ್ಸವ ಕಾರ್ಯಕ್ರಮದ ನಂತರ ಉಳಿಕೆಯಾದ ಮೊತ್ತವನ್ನು ಕೇಂದ್ರೀಯ ಸಮಿತಿಗೆ ಅಧ್ಯಕ್ಷ ಯಶೋಧರ ಶೆಟ್ಟಿ ತಂಡದವರು ದೇಣಿಗೆ ರೂಪದಲ್ಲಿ ಅರ್ಪಿಸಿದರು. ಕೇಂದ್ರ ಮಹಿಳಾ ಘಟಕದ ವತಿಯಿಂದ ಮಾರ್ಚ್ 22ರಂದು ಜರುಗುವ 7ನೇ ವಾರ್ಷಿಕೋತ್ಸವದ ಆಮಂತ್ರಣ ಪತ್ರಿಕೆಯನ್ನು ಬಿಡುಗಡೆಗೊಳಿಸಲಾಯಿತು. ವಿವಿಧ ಘಟಕಗಳಿಂದ ಆಗಮಿಸಿದ ಟ್ರಸ್ಟಿಗಳು, ಪದಾಧಿಕಾರಿಗಳು ಉಪಸ್ಥಿತರಿದ್ದರು.

ಭುಜಬಲಿ ಧರ್ಮಸ್ಥಳ, ಕೇಂದ್ರೀಯ ಘಟಕದ ಪ್ರಧಾನ ಕಾರ್ಯದರ್ಶಿ ಪುರುಷೋತ್ತಮ ಭಂಡಾರಿ ಅಡ್ಯಾರ್, ಕೋಶಾಧಿಕಾರಿ ಸಿಎ ಸುದೇಶ್ ಕುಮಾರ್ ರೈ, ಜೊತೆ ಕಾರ್ಯದರ್ಶಿ ರವಿ ಶೆಟ್ಟಿ ಅಶೋಕನಗರ ಸಂಘಟನಾ ಕಾರ್ಯದರ್ಶಿಗಳಾದ ಬಾಳ ಜಗನ್ನಾಥ ಶೆಟ್ಟಿ, ಪ್ರದೀಪ್ ಆಳ್ವ ಕದ್ರಿ ಮತ್ತಿತರರು ಉಪಸ್ಥಿತರಿದ್ದರು.

- ಯುರೋಪ್‌ನಲ್ಲಿ ಪಟ್ಲ ಫೌಂಡೇಶನ್
- ಯಕ್ಷ ಶಿಕ್ಷಣ ಕ್ರಾಂತಿ
- 4 ಸಾವಿರ ಮಕ್ಕಳಿಗೆ ಯಕ್ಷ ಶಿಕ್ಷಣ
- ಕಲಾವಿದರಿಗೆ ಮನೆ ಹಸ್ತಾಂತರ

ಕಲಾವಿದರಿಗೆ ವಸತಿ

ಪಟ್ಲ ಫೌಂಡೇಶನ್ ಟ್ರಸ್ಟ್ ಈ ವರೆಗೆ 24 ಮನೆಗಳನ್ನು ನಿರ್ಮಿಸಿ ಕಲಾವಿದರಿಗೆ ಹಸ್ತಾಂತರ ಮಾಡಿದೆ. ಯಕ್ಷಾಶ್ರಯ ವಸತಿ ಯೋಜನೆಯಡಿ 25ನೇ ಮನೆಯ ಹಸ್ತಾಂತರ ಮಾ.22 ರಂದು ಕುಂಬಳೆಯ ಸಮೀಪ ನಡೆಯಲಿರುವುದು. ಈಗಾಗಲೇ ಸುಮಾರು 200 ಮನೆಗಳ ರಿಪೇರಿ ದುರಸ್ತಿ ಕಾಮಗಾರಿಗೆ ಆರ್ಥಿಕ ಸಹಾಯ ಮಾಡಲಾಗಿದೆ. ಅದೇ ರೀತಿ ಆರೋಗ್ಯ, ವಿದ್ಯಾರ್ಥಿವೇತನ, ಶಿಕ್ಷಣ, ವೈದ್ಯಕೀಯ ನೆರವು ಇನ್ನಿತರ ವಿಚಾರಗಳಿಗೆ ಸಂಬಂಧಿಸಿದಂತೆ ಕಲಾವಿದರಿಗೆ ಕೋಟ್ಯಾಂತರ ನೆರವು ನೀಡಲಾಗಿದೆ. ಈ ವರ್ಷವೂ ಯಕ್ಷಗಾನ ಕಲಾವಿದರಿಗಲ್ಲದೆ ನಾಟಕ ರಂಗಭೂಮಿ ಕಲಾವಿದರು ಹಾಗೂ ದೈವಾರಾಧನೆಯ ನರ್ತನ ಪರಿಚಾರಕರಿಗೂ ವಿಮಾ ಸೌಲಭ್ಯವನ್ನು ವಿಸ್ತರಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಪಟ್ಲ ಸತೀಶ್ ಶೆಟ್ಟಿ ತಿಳಿಸಿದರು.

ಆ್ಯಸಿಡ್ ದಾಳಿ: ಸಂತ್ರಸ್ತರಿಗೆ ಧೈರ್ಯ ತುಂಬಿದ ಸ್ಪೀಕರ್

ಸಂ.ಕ. ಸಮಾಚಾರ, ಮಂಗಳೂರು

ಜಿಲ್ಲೆಯ ಕಡಬ ಸರಕಾರಿ ಕಾಲೇಜಿನಲ್ಲಿ ಆಸಿಡ್ ದಾಳಿಗೊಳಗಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮೂವರು ವಿದ್ಯಾರ್ಥಿಗಳನ್ನು ವಿಧಾನ ಸಭಾಧ್ಯಕ್ಷ ಯು.ಟಿ ಖಾದರ್ ಅವರು ಭೇಟಿ ಮಾಡಿ ಸಂತ್ರಸ್ತರ ಆರೋಗ್ಯ ವಿಚಾರಿಸಿದರು.

ಈ ಸಂದರ್ಭದಲ್ಲಿ ಸಂತ್ರಸ್ತರ ಕುಟುಂಬಸ್ಥರ ಜತೆ ಮಾತುಕತೆ ನಡೆಸಿ ಧೈರ್ಯ ತುಂಬಿದರು. ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಮುಲ್ಲೈ ಮುಹಿಲನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ ಬಿ ರಿಷ್ಯಂತ್ ಅವರು ಘಟನೆ ಮತ್ತು ಇಲಾಖೆ ಕೈಗೊಂಡ ಕ್ರಮಗಳ ಬಗ್ಗೆ ಸಭಾಧ್ಯಕ್ಷರಿಗೆ ಸಮಗ್ರ ಮಾಹಿತಿ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಜೊತೆ ಮಾತುಕತೆ ನಡೆಸಿದ ಸಭಾಧ್ಯಕ್ಷರು ಆರೋಪಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲು ಸೂಚನೆ ನೀಡಿದರು. ಇದು ಅತ್ಯಂತ ಕಳವಳಕಾರಿ ಹಾಗೂ ಆಘಾತಕಾರಿ ವಿಷಯ, ಇಂತಹ ವಿಷಯಗಳ ಕುರಿತಾಗಿ ಜಾಗೃತಿ ಮೂಡಿಸುವ ಕೆಲಸ ಆಗಬೇಕಿದೆ. ಯಾವುದೇ ಕಾರಣಕ್ಕೂ ಇನ್ನೊಬ್ಬರ ಮೇಲೆ ಇಂತಹ ಅಪರಾಧ ಎಸಗುವಂತಹ ಮನಸ್ಥಿತಿ ಬೆಳೆಯದಂತೆ ಎಚ್ಚರ ವಹಿಸಬೇಕಾಗಿದೆ.

ವಿದ್ಯಾರ್ಥಿಗಳ ಸಂಪೂರ್ಣ ಚಿಕಿತ್ಸಾ ವೆಚ್ಚ ಸರಕಾರದಿಂದಲೇ ಭರಿಸಲು ಜಿಲ್ಲಾ ಉಸ್ತುವಾರಿ ಸಚಿವರಾದ ದಿನೇಶ್ ಗುಂಡೂರಾವ್ ಅರವರ ಜೊತೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಗಿದ್ದು, ಸರಕಾರದಿಂದ ಸೂಕ್ತ ಪರಿಹಾರ ಒದಗಿಸಲು ಜಿಲ್ಲಾಡಳಿತಕ್ಕೆ ಸೂಚನೆ ನೀಡಿದ್ದೇನೆ ಎಂದು ತಿಳಿಸಿದ್ದಾರೆ.

ಕುದುರೆಗಳ ಸ್ವಚ್ಛಂದ ಓಡಾಟ ವಾಹನ ಸವಾರರಿಗೆ ಗಲಿಬಿಲಿ

ಸಂ.ಕ. ಸಮಾಚಾರ, ಕುಂದಾಪುರ

ಸಾಸ್ತಾನ ಪರಿಸರದ ರಾಷ್ಟ್ರೀಯ ಹೆದ್ದಾರಿಯಲ್ಲಿ ಕುದುರೆಗಳು ಸ್ವಚ್ಛಂದ ಓಡಾಟ ನಡೆಸಿ, ವಾಹನ ಸವಾರರನ್ನು ಗಲಿಬಿಲಿಗೊಳಿಸಿದ ಘಟನೆ ಮಂಗಳವಾರ ನಡೆದಿದೆ.

ಬ್ರಹ್ಮಾವರ ಸಮೀಪ ಆರೂರಿನ ಫಾರ್ಮ್‌ವೊಂದರಿಂದ ತಪ್ಪಿಸಿಕೊಂಡ ಮೂರು ಕುದುರೆಗಳು ರಾಷ್ಟ್ರೀಯ ಹೆದ್ದಾರಿ ಮೂಲಕ ಓಡಿ ಬಂದಿದ್ದು, ಹೆದ್ದಾರಿಯಲ್ಲಿ ಸಾಗುತ್ತಿದ್ದ ವಾಹನಗಳವರು ಸ್ವಲ್ಪ ಹೊತ್ತು ಕಕ್ಕಾಬಿಕ್ಕಿಯಾಗುವಂತಾಯಿತು.

ಕೊನೆಗೂ ಸಾಸ್ತಾನ ಟೋಲ್ ಗೇಟ್ ಸಮೀಪ ಸ್ಥಳೀಯರ ಸಹಕಾರದೊಂದಿಗೆ ಈ ಕುದುರೆಗಳನ್ನು ತಡೆದು ನಿಲ್ಲಿಸುವಲ್ಲಿ ಯಶಸ್ವಿಯಾದರು. ಇವು ಲಕ್ಷಾಂತರ ರೂ. ಬೆಲೆ ಬಾಳುವ ರೇಸ್ ಕುದುರೆಗಳಾಗಿದ್ದು, ಹೆದ್ದಾರಿಯಲ್ಲಿ ಕುದುರೆ ಓಡಾಡುವುದನ್ನು ನೋಡಿದ ಪ್ರಯಾಣಿಕರು ಆಶ್ಚರ್ಯಚಕಿತರಾಗಿ ಬೆಚ್ಚಿಬಿದ್ದಿದ್ದಾರೆ. ಇದರ ಜೊತೆಗೆ ವಾಹನ ಸವಾರರು ಕುದುರೆಗಳ ಸುತ್ತ ಸುರಕ್ಷಿತವಾಗಿ ಸಂಚರಿಸಲು ಹರಸಾಹಸ ಪಡುತ್ತಿದ್ದರಿಂದ ವಾಹನ ಸಂಚಾರ ಸ್ವಲ್ಪ ಹೊತ್ತು ಸ್ಥಗಿತಗೊಂಡಿತ್ತು.

ಹಲವರು ಇದನ್ನು ವಿಡಿಯೋ ಮಾಡಿ ಹರಿಯಬಿಟ್ಟರು. ಕುದುರೆ ಓಡಾಟದ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದಂತೆ ತಕ್ಷಣ ಕುದುರೆ ಮಾಲೀಕರು ಸ್ಥಳಕ್ಕೆ ಧಾವಿಸಿ ಕುದುರೆಗಳನ್ನು ಕೊಂಡೊಯ್ದಿದ್ದಾರೆ. ಇನ್ನೂ ಎರಡು ಕುದುರೆಗಳು ತಪ್ಪಿಸಿಕೊಂಡು ನಾಪತ್ತೆಯಾಗಿವೆ.

ಬಸ್‌ನಲ್ಲಿ ಸಿಕ್ಕ ಚಿನ್ನಾಭರಣ ಹಿಂದಿರುಗಿಸಿದ ನಿರ್ವಾಹಕ

ಸಂ.ಕ. ಸಮಾಚಾರ, ಮೂಲ್ಕಿ

ಕಿನ್ನಿಗೋಳಿಯ ಬಸ್ ನಿರ್ವಾಹಕರೊಬ್ಬರು ಬಸ್ಸಿನಲ್ಲಿ ಸಿಕ್ಕಿದ ಮಹಿಳೆಯೊಬ್ಬರ ಲಕ್ಷಾಂತರ ಮೌಲ್ಯದ ಚಿನ್ನಾಭರಣಗಳನ್ನು ಮಾಲೀಕರಿಗೆ ಹಿಂದಿರುಗಿಸಿ ಪ್ರಾಮಾಣಿಕತೆ ಮೆರೆದಿದ್ದಾರೆ.

ಕಿನ್ನಿಗೋಳಿಯಿಂದ ಕಟೀಲು ಕಡೆಗೆ ಸಂಚರಿಸುತ್ತಿದ್ದ ನವದುರ್ಗ ಬಸ್‌ನಲ್ಲಿ ಕಟೀಲು ನಿವಾಸಿ ವಾರಿಜಾ ಎಂಬವರ ಸುಮಾರು 2 ಲಕ್ಷ ಮೌಲ್ಯದ ಚಿನ್ನಾಭರಣಗಳ ಸಣ್ಣ ಬ್ಯಾಗ್ ನಿರ್ವಾಹಕ ಸಂತೋಷ್ ಶೆಟ್ಟಿ ಸಂಕಲಕರಿಯ ಎಂಬವರಿಗೆ ದೊರೆತಿತ್ತು. ಕೂಡಲೇ ಕಾರ್ಯಪ್ರವೃತ್ತರಾದ ಅವರು ವಾಟ್ಸಪ್ ಸಹಿತ ಸಾಮಾಜಿಕ ಜಾಲತಾಣದಲ್ಲಿ ಚಿನ್ನಾಭರಣ ಕಳೆದುಕೊಂಡ ವಾರಸುದಾರರನ್ನು ಪತ್ತೆ ಮಾಡಲು ಪ್ರಯತ್ನಿಸಿದ್ದರು. ಇತ್ತ ಚಿನ್ನ ಕಳೆದುಕೊಂಡ ಮಹಿಳೆ ವನಜ ಅವರು ಕಂಗಾಲಾಗಿ ಕೊನೆಗೂ ಸಾಮಾಜಿಕ ಜಾಲತಾಣದ ಮೂಲಕ ಮಾಹಿತಿ ಪಡೆದು, ಚಿನ್ನಾಭರಣ ತೆಗೆದುಕೊಂಡು ಖುಷಿಪಟ್ಟರು.

ಚಿನ್ನಾಭರಣ ಮಹಿಳೆಗೆ ಹಸ್ತಾಂತರ ಕಾರ್ಯಕ್ರಮದಲ್ಲಿ ಕಿನ್ನಿಗೋಳಿ ಬಸ್ ಮಾಲೀಕ ಸಂಘದ ಅಧ್ಯಕ್ಷ ದುರ್ಗಾ ಪ್ರಸಾದ್ ಹೆಗ್ಡೆ, ಕಾರ್ಯದರ್ಶಿ ಸ್ವರಾಜ್ ಶೆಟ್ಟಿ, ಕಿನಿಗೊಳಿ ರೋಟರಿ ಕ್ಲಬ್‌ನ ಹೆರಿಕ್ ಪಾಯಸ್, ಚಾಲಕ ನಿರ್ವಾಹಕ ಸಂಘದ ಸಂದೀಪ್, ಕರಾಟೆ ಶಿಕ್ಷಕ ಚಂದ್ರಹಾಸ ಅಂಚನ್ ಉಪಸ್ಥಿತರಿದ್ದರು.

ಕಳೆದು ಹೋಗಿದೆ
ತಾ: 30.1.2024ರಂದು
ಮಂಗಳೂರಿನಿಂದ ಯೆಯ್ಯಾಡಿಗೆ
ಆಟೋದಲ್ಲಿ ಪ್ರಯಾಣಿಸುವಾಗ
MGT–1–10734–2023–24
ನಂಬರಿನ ಡಾಕ್ಯುಮೆಂಟ್
ಕಳೆದುಹೋಗಿರುತ್ತದೆ. ಸಿಕ್ಕಿದವರು
ಸಂಪರ್ಕಿಸಿ:
99016 59795

ಏಕ ಬಳಕೆ ಪ್ಲಾಸ್ಟಿಕ್ ಹಂತ–ಹಂತವಾಗಿ ನಿಷೇಧ

- ಸ್ವಚ್ಛ ಮಂಗಳೂರು ನಿರ್ಮಾಣಕ್ಕೆ ಸಾರ್ವಜನಿಕರ ಸಹಕಾರ ಅಗತ್ಯ
- ಜಾಗೃತಿ ಮೂಡಿಸಲು ಕಾರ್ಯಾಗಾರ

ಮಂಗಳೂರು: ನಗರದಲ್ಲಿ ಏಕ ಬಳಕೆ ಪ್ಲಾಸ್ಟಿಕ್ ಉತ್ಪನ್ನಗಳ ಮಾರಾಟ ಮತ್ತು ಬಳಕೆ ನಿಷೇಧವನ್ನು ಹಂತ ಹಂತವಾಗಿ ಜಾರಿಗೆ ತರಲು ಪಾಲಿಕೆ ಮುಂದಾಗಿದ್ದು, 'ಸ್ವಚ್ಛ ಮಂಗಳೂರು' ನಿರ್ಮಾಣಕ್ಕೆ ಸಾರ್ವಜನಿಕರ ಸಹಕಾರ ಅಗತ್ಯ ಎಂದು ಮೇಯರ್ ಸುಧೀರ್ ಶೆಟ್ಟಿ ಕಣ್ಣೂರು ಹೇಳಿದರು.

ಮಂಗಳೂರು ನಗರದಲ್ಲಿ ಏಕ ಬಳಕೆ ಪ್ಲಾಸ್ಟಿಕ್ ಸಂಪೂರ್ಣವಾಗಿ ನಿಷೇಧಿಸುವ ನಿಟ್ಟಿನಲ್ಲಿ ಮಂಗಳೂರು ಮಹಾನಗರ ಪಾಲಿಕೆ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ಪಾಲಿಕೆಯಲ್ಲಿ ಮಂಗಳವಾರ ಉದ್ಯಮಿಗಳು ಸಹಿತ ವಿವಿಧ ವರ್ಗದವರಿಗೆ ಆಯೋಜಿಸಲಾದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು. ಪ್ಲಾಸ್ಟಿಕ್‌ನಿಂದಾಗಿ ಭೂಮಂಡಲಕ್ಕೆ ಬಹು ತೊಂದರೆಯಾಗುತ್ತಿದೆ. ಮಳೆ ನೀರು ಭೂಮಿಯಲ್ಲಿ ಇಂಗಲು ಪ್ಲಾಸ್ಟಿಕ್ ತಡೆ ಒಡ್ಡುತ್ತಿದೆ. ಪ್ಲಾಸ್ಟಿಕ್‌ನಿಂದ ಫಲವತ್ತು ಭೂಮಿಯಲ್ಲಿ ಕೃಷಿ ಚಟುವಟಿಕೆಗಳಿಗೆ ತೊಂದರೆ ಉಂಟಾಗುತ್ತಿದೆ. ಈ ಕುರಿತು ಜಾಗೃತಿ ಮೂಡಿಸಲು ಕಾರ್ಯಾಗಾರ ಆಯೋಜನೆ ಮಾಡಿದ್ದೇವೆ ಎಂದರು. ಉಪ ಆಯುಕ್ತ ರವಿಕುಮಾರ್ ಮಾತನಾಡಿ, ಏಕ ಬಳಕೆ ಪ್ಲಾಸ್ಟಿಕ್ ನಗರವನ್ನಾಗಿ ಘೋಷಿಸುವ ಹಿನ್ನೆಲೆಯಲ್ಲಿ ನಿರ್ಧಿಷ್ಟ ಕ್ರಮವನ್ನು ಕೈಗೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ಸರ್ವರ ಸಹಕಾರ ಅಗತ್ಯ ಎಂದರು. ಕೇಂದ್ರ ಮಾಲಿನ್ಯ ನಿಯಂತ್ರ ಮಂಡಳಿಯ ಅಧಿಕಾರಿ ಮಹಿಮ ಅವರು ಕಾರ್ಯಾಗಾರ ನಡೆಸಿಕೊಟ್ಟು, ಪ್ಲಾಸ್ಟಿಕ್ ಎಂದಿಗೂ ಸಂಸ್ಕರಣೆಯಾಗುವುದಿಲ್ಲ. ಪ್ಲಾಸ್ಟಿಕ್ ಉತ್ಪಾದನೆಯಲ್ಲಿ ಭಾರತ 5ನೇ ಸ್ಥಾನದಲ್ಲಿದೆ. ಶೇ.43ರಷ್ಟು ಪ್ಲಾಸ್ಟಿಕ್ ತ್ಯಾಜ್ಯಗಳು ಉತ್ಪತ್ತಿಯಾಗುತ್ತಿದೆ. ಪ್ಲಾಸ್ಟಿಕ್ ಗೊಬ್ಬರವಾಗಿ ಮಾರ್ಪಾಡಾಗುವುದಿಲ್ಲ ಪರಿಣಾಮ 5 ಎಂ.ಎಂ. ಮೈಕ್ರೋ ಕಣಗಳಾಗಿ ನಮ್ಮ ಆಹಾರದಲ್ಲಿ ಸೇರಿಕೊಳ್ಳುತ್ತದೆ. ಇದು ಅನಾರೋಗ್ಯಕ್ಕೆ ಕಾರಣವಾಗುತ್ತಿದೆ ಎಂದು ವಿವರಿಸಿದರು.

ಉಪಮೇಯರ್ ಸುನೀತಾ, ಸ್ಥಾಯಿ ಸಮಿತಿ ಅಧ್ಯಕ್ಷರಾದ ವರುಣ್ ಚೌಟ, ಭರತ್ ಕುಮಾರ್, ಗಣೇಶ್ ಕುಲಾಲ್, ಲೋಹಿತ್ ಅಮೀನ್, ಮನಪಾ ಪ್ರತಿಪಕ್ಷ ನಾಯಕ ಪ್ರವೀಣ್ ಚಂದ್ರ ಆಳ್ವ, ಹಿರಿಯ ಪರಿಸರ ಅಧಿಕಾರಿ ವಿಜಯ್ ಹೆಗ್ಡೆ, ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿ ಮಂಜುಳ ಸಹಿತ ಕೈಗಾರಿಕಾ ಪ್ರನಿಧಿಗಳು, ಸಾರ್ವಜನಿಕರು, ವಿವಿಧ ಇಲಾಖೆ ಅಧಿಕಾರಿಗಳು ಹಾಜರಿದ್ದರು.

ಮೈಮೂನ–ಮರ್ಝಿನಾಗೆ ಪ್ರೆಸ್ ಕ್ಲಬ್ ವರ್ಷದ ಪ್ರಶಸ್ತಿ

ಸಂ.ಕ. ಸಮಾಚಾರ, ಮಂಗಳೂರು

ಗ್ರಾಮೀಣ ಪ್ರದೇಶದಲ್ಲಿ ಹೈನುಗಾರಿಕೆ ಕೈಗೊಂಡು ಕ್ಷೀರಕ್ರಾಂತಿಯನ್ನುಂಟು ಮಾಡಿರುವ ಅಪೂರ್ವ ಸಾಧಕಿಯರಾಗಿರುವ ಉಳ್ಳಾಲ ತಾಲೂಕಿನ ಹರೇಕಳ ಗ್ರಾಮದ ಬಾವಲಿಗುರಿಯ 'ತಾಯಿ–ಮಗಳು ಮೈಮೂನ– ಮರ್ಝಿನಾ ರಾಜ್ಕಮಾಲ್ ಪ್ರತಿಷ್ಠಿತ ಮಂಗಳೂರು ಪ್ರೆಸ್ ಕ್ಲಬ್ ನ 2023–24ನೇ ಸಾಲಿನ ವರ್ಷದ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಹಿರಿಯ ಪತ್ರಕರ್ತ ಯು. ಕೆ.ಕುಮಾರನಾಥ್ ಮತ್ತು ಎಸ್ ಡಿಎಂ ಕಾನೂನು ಮಹಾವಿದ್ಯಾಲಯದ ಪ್ರಾಧ್ಯಾಪಕ ಪ್ರೊ.ಪುಷ್ಪರಾಜ್ .ಕೆ ನೇತೃತ್ವದ ಆಯ್ಕೆ ಸಮಿತಿಯು ಮಂಗಳೂರು ಪ್ರೆಸ್ ಕ್ಲಬ್‌ನ ಪ್ರತಿಷ್ಠಿತ ಪ್ರಶಸ್ತಿಗೆ ಇವರನ್ನು ಆಯ್ಕೆ ಮಾಡಿದೆ.

ಮಾ. 10ರಂದು ನಡೆಯಲಿರುವ ಪ್ರೆಸ್ ಕ್ಲಬ್ ದಿನಾಚರಣೆ ವೇಳೆ ಇವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಎಂದು ಮಂಗಳೂರು ಪ್ರೆಸ್ ಕ್ಲಬ್ ನ ಪ್ರಧಾನ ಕಾರ್ಯದರ್ಶಿ ಇಬ್ರಾಹಿಂ ಅಡ್ಕಸ್ಥಳ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಂಬ್ ಸ್ಫೋಟ: ಆರೋಪಿ ಬಂಧನಕ್ಕೆ ಆಗ್ರಹಿಸಿ ಪ್ರತಿಭಟನೆ

ಸಂ.ಕ.ಸಮಾಚಾರ, ಮಂಗಳೂರು

ಬೆಂಗಳೂರಿನ ಕೆಫೆಯಲ್ಲಿ ಸಂಭವಿಸಿದ ಬಾಂಬ್ ಸ್ಫೋಟ ಪ್ರಕರಣದ ಆರೋಪಿಗಳನ್ನು ಬಂಧಿಸುವಂತೆ ಆಗ್ರಹಿಸಿ ಭಯೋತ್ಪಾದನಾ ವಿರೋಧಿ ಹೋರಾಟ ಸಮಿತಿ ನೇತೃತ್ವದಲ್ಲಿ ಬುಧವಾರ ಮಂಗಳೂರಿನ ಮಿನಿ ವಿಧಾನಸೌಧ ಬಳಿ ಪ್ರತಿಭಟನೆ ನಡೆಯಿತು.

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ವಕೀಲ ಸಂದೀಪ್ ವಳಲಂಬೆ, ರಾಜ್ಯ ಸರ್ಕಾರ ಒಂದು ವರ್ಗವನ್ನು ಓಲೈಸುತ್ತಿದೆ. ಪಾಕ್ ಪರ ಘೋಷಣೆ ಕೂಗಿದವರ ವಿರುದ್ಧ, ಬಾಂಬ್ ಸ್ಫೋಟ ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳಲು ಹಿಂದೇಟು ಹಾಕುತ್ತಿದೆ. ಮಂಗಳೂರಿನಲ್ಲಿ ಹಿಂದೂ ಧರ್ಮ ಅವಹೇಳನ ಮಾಡಿದ ಶಿಕ್ಷಕಿ ವಿರುದ್ಧ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಶಾಸಕರ ಮೇಲೆ ಕೂಡಲೇ ಎಫ್‌ಐಆರ್ ದಾಖಲಿಸಿರುವ ಸರ್ಕಾರ ಹಿಂದೂ ವಿರೋಧಿಯಾಗಿ ವರ್ತಿಸುತ್ತಿದೆ ಎಂದು ಆರೋಪಿಸಿದರು.

ಶಾಸಕರಾದ ವೇದವ್ಯಾಸ ಕಾಮತ್, ಡಾ.ಭರತ್ ಶೆಟ್ಟಿ, ಪ್ರತಾಪಸಿಂಹ ನಾಯಕ್, ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ಮೇಯರ್ ಸುಧೀರ್ ಶೆಟ್ಟಿ, ಮುಖಂಡರಾದ ಜಗದೀಶ್ ಶೇಣವ, ಮೋನಪ್ಪ ಭಂಡಾರಿ, ನಿತಿನ್ ಕುಮಾರ್ ಮೊದಲಾದವರಿದ್ದರು.

ಘಟನೆಯನ್ನು ಖಂಡಿಸಿ ಪುತ್ತೂರಿನಲ್ಲೂ ಪ್ರತಿಭಟನೆ ನಡೆಯಿತು. ಈ ಸಂದರ್ಭ ಪೊಲೀಸರು ಮತ್ತು ಪ್ರತಿಭಟನಾಕಾರರ ನಡುವೆ ಮಾತಿನ ಚಕಮಕಿ ನಡೆಯಿತು.

kotak
ಕೊಟಕ್ ಮಹೀಂದ್ರಾ ಬ್ಯಾಂಕ್ ಲಿಮಿಟೆಡ್
ಆಸ್ತಿ ಮಾರಟಕ್ಕಾಗಿ ಆನ್‌ಲೈನ್ ಇ-ಹರಾಜು
ನೋಂದಾಯಿತ ಕಚೇರಿ : 27 ಬಿಕೆಸಿ, ಸಿ 27 ಜಿ-ಬ್ಲಾಕ್, ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಬಾಂದ್ರಾ (ಪೂರ್ವ) ಮುಂಬೈ, ಮಹಾರಾಷ್ಟ್ರ, ಪಿನ್ ಕೋಡ್–400 051.
ಶಾಖೆ ಕಚೇರಿ : ಕೊಟಕ್ ಮಹೀಂದ್ರಾ ಬ್ಯಾಂಕ್ ಲಿಮಿಟೆಡ್, ನಂ. 22, ಐಎನ್‌ಜಿ ವೈಶ್ಯ ಹೌಸ್, ಎಂ.ಜಿ. ರಸ್ತೆ ಬೆಂಗಳೂರು. 560001, ಕರ್ನಾಟಕ.

ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಮಾರಾಟ ಪ್ರಕಟಣೆ

ಆರ್ಥಿಕ ಸ್ವತ್ತಿನ ಭದ್ರತೆ ಮತ್ತು ಪುನರ್‌ನಿರ್ಮಾಣ ಮತ್ತು ಭದ್ರತಾ ಬಡ್ಡಿ ಕಾಯಿದೆ ಜಾರಿ, ೨೦೦೨ರ ಅಡಿಯಲ್ಲಿ ನಿಯಮ ೮ (೫) ಮತ್ತು ನಿಯಮ ೮(೬)ರ ಅಧಿ ನಿಯಮದ ನಿಬಂಧನೆಗಳನ್ನು ಓದಿಕೊಂಡಂತೆ ಭದ್ರತಾ ಬಡ್ಡಿ (ಜಾರಿ) ನಿಯಮ, ೨೦೦೨ರ ಅಡಿ ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಇ-ಹರಾಜು ಮಾರಾಟ ಪ್ರಕಟಣೆ.

ಈ ಮೂಲಕ ಸಾರ್ವಜನಿಕರು ಮತ್ತು ನಿರ್ದಿಷ್ಟವಾಗಿ ಸಾಲಗಾರ (ರು) ಮತ್ತು ಜಾಮೀನುದಾರರಿಗೆ ಸೂಚಿಸುವುದು ಏನೆಂದರೆ ಕೆಳಗೆ ವಿವರಿಸಿದ ಸ್ಥಿರ ಆಸ್ತಿಯನ್ನು ಭದ್ರತಾ ಸಾಲಗಾರನಿಗೆ ಅಡಮಾನ ಮಾಡಲಾಗಿದ್ದು, ಅದನ್ನು ಫುಲ್ಲರ್‌ಟಾನ್ ಇಂಡಿಯಾ ಹೋಮ್ ಫೈನಾನ್ಸ್ ಲಿಮಿಟೆಡ್ (ಈ ನಂತರ ಎಫ್‌ಐಎಚ್‌ಎಫ್‌ಸಿ")ನ ಅಧಿಕೃತ ಅಧಿಕಾರಿಯು ಸ್ವಾಧೀನ ಪಡೆಸಿಕೊಂಡಿದ್ದು, ಕೊಟಕ್ ಮಹೀಂದ್ರಾ ಬ್ಯಾಂಕ್ ಲಿಮಿಟೆಡ್‌ದ ಸಾಲದ ಒಪ್ಪಂದದ ನಿಯೋಜನೆ ಅನುಸಾರ "ಎಫ್‌ಐಎಚ್‌ಎಫ್‌ಸಿಎಲ್"ಗೆ ಬಾಕಿ ಉಳಿದಿರುವ ಮೊತ್ತ ರೂ. 57,07,516/-(ರೂಪಾಯಿ ಐವತ್ತೇಳು ಲಕ್ಷ ಏಳು ಸಾವಿರ ಐದು ನೂರಾ ಹದಿನಾರು ಮಾತ್ರ) ದಿನಾಂಕ : 05-03-2024 ರಂತೆ ಒಪ್ಪಂದದ ಬಡ್ಡಿ, ವೆಚ್ಚ ಹಾಗೂ ಶುಲ್ಕದೊಂದಿಗೆ ಅನ್ವಯವಾಗುವ ಮೊತ್ತದ ವಸೂಲಿಗಾಗಿ ಸಾಲದ ಖಾತೆ ನಂ. 601307210490329 ರಲ್ಲಿ ತಿಳಿಸಲಾದ ಮೊತ್ತವನ್ನು ಕೆಎಂಬಿಎಲ್ ಭದ್ರತಾ ಸಾಲಗಾರರು, ಶ್ರೀಮತಿ ಸತ್ಯವತಿ ಶೆಟ್ಟಿ, ಶ್ರೀ ವಿಶ್ವನಾಥ ಶೆಟ್ಟಿ, ಮೆ. ಸಾನ್ವಿ ಫ್ಯಾಷನ್, ಅವರ ಇಲ್ಲಿ ತಿಳಿಸಲಾದ ಆಸ್ತಿಯನ್ನು "ಎಲ್ಲದೆಯೋ ಹಾಗೆ", "ಏನಿದೆಯೋ ಹಾಗೆ" ಮತ್ತು "ಹೇಗಿದೆಯೋ ಹಾಗೆ" ಅದರ ಮಾರಾಟವನ್ನು ದಿನಾಂಕ : 27-03-2024 ರಂದು ಮಧ್ಯಾಹ್ನ 12.00 ರಿಂದ 01.00 ರವರೆಗೆ 5 ನಿಮಿಷಗಳ ವಿಸ್ತರಣೆಯೊಂದಿಗೆ ನಡೆಸಲಾಗುತ್ತದೆ. ಮೀಸಲು ಮೊತ್ತ ರೂ. 25,20,000/- (ರೂಪಾಯಿ ಇಪ್ಪತ್ತೈದು ಲಕ್ಷ ಇಪ್ಪತ್ತು ಸಾವಿರ ಮಾತ್ರ) ಇದೆ. ಮುಂಗಡ ಹಣ ಠೇವಣಿ ರೂ. 2,52,000/- (ರೂಪಾಯಿ ಎರಡು ಲಕ್ಷ ಐವತ್ತೆರಡು ಸಾವಿರ ಮಾತ್ರ) ಇದೆ. ಕೆವೈಸಿಯೊಂದಿಗೆ ಇಎಂಡಿ ಸಲ್ಲಿಸುವ ಕೊನೆಯ ದಿನಾಂಕ : 26-03-2024 ರಂದು ಸಂಜೆ 6.00 ರವರೆಗೆ.

ಆಸ್ತಿ ವಿವರಣೆ : ಅಂಚೆ ವಿಳಾಸ : ಸ್ವತ್ತಿನ ಎಲ್ಲ ಭಾಗ–ವಿಭಾಗ ಸೇರಿ ಕೃಷಿಯೇತರ ಸ್ಥಿರಾಸ್ತಿ ಡೋರ್ ನಂ. 2–93/6 & ಸರ್ವೇ ನಂ. 61/91ಎ (ಪಿ), ಕಿಸ್ಮ: ಪರಿವರ್ತಿತ, ವಿಸ್ತೀರ್ಣ: 0.04.73 ಎಕರೆ (2061 ಚದರ ಅಡಿ), ಖಾತಾ ನಂ. 966, ವಸತಿ ಕಟ್ಟಡ ಡೋರ್ ನಂ. 2–93/6, ಗಾಂಧಿನಗರ ಕಾವೂರು ಗ್ರಾಮ ಮಂಗಳೂರು ತಾಲುಕು, ಮಂಗಳೂರು ನಗರ ಪಾಲಿಕೆ ವ್ಯಾಪ್ತಿ, ನೋಂದಣಿ ಉಪ ಜಿಲ್ಲೆ ಮಂಗಳೂರು ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ ಮತ್ತು ಎಲ್ಲ ಮಾಮೂಲು ಮತ್ತು ಅನುಕೂಲರಕರ ಸೌಲಭ್ಯ, ನೀರು, ದಾರಿ ಇತ್ಯಾದಿ ಸೌಲಭ್ಯ ಒಳಗೊಂಡಿದೆ. ಚಕ್ಕುಬಂಧಿ :- ಪೂರ್ವ : ಸರ್ವೇ ಲೈನ್, ಪಶ್ಚಿಮ : ಸರ್ವೇ ಉಪ ವಿಭಾಗ ಲೈನ್, ಉತ್ತರ : ಇದೇ ಸರ್ವೇ ನಂ.ನ ಭಾಗ, ದಕ್ಷಿಣ : ಇದೇ ಸರ್ವೇ ನಂ.ನ ಉಪ ವಿಭಾಗದಲ್ಲಿ ರಸ್ತೆ.

ಈ ಮೂಲಕ ಸಾಲಗಾರರಿಗೆ ತಿಳಿಸುವುದೇನೆಂದರೆ ಕಾಯಿದೆಯ ಸೆಕ್ಷನ್ 13 ರ ಉಪವಿಭಾಗ 8ರ ನಿಬಂಧನೆಯಲ್ಲಿ ಭದ್ರತಾ ಆಸ್ತಿಯನ್ನು ಪಡೆದುಕೊಳ್ಳಬಹುದು. ಯಾವುದೇ ಕಾರಣಕ್ಕೂ ಇಲ್ಲಿ ನಿಗದಿತ ಹರಾಜು ವಿಫಲವಾದಲ್ಲಿ ಯಾವುದಾದರೂ ಕಾರಣದಿಂದ ಭದ್ರತಾ ಸಾಲದಾತರು ಖಾಸಗಿ ಒಪ್ಪಂದದ ಮೂಲಕ ಮಾರಾಟದ ಭದ್ರತಾ ಬಡ್ಡಿಯನ್ನು ಜಾರಿಗೊಳಿಸಬಹುದು ಎಂಬುದನ್ನು ನಿರ್ದಿಷ್ಟವಾಗಿ ಸಾಲಗಾರರಿಗೆ ತಿಳಿಸಲಾಗಿದೆ.

ಮಾರಾಟದಲ್ಲಿರುವ ಸ್ವತ್ತುಗಳ ಬಗ್ಗೆ ಯಾವುದೇ ಸ್ಪಷ್ಟೀಕರಣದ ಅಗತ್ಯವಿದ್ದಲ್ಲಿ, ಬಿಡ್ಡರ್‌ಗಳು ಶ್ರೀ ಶ್ರೀಜಿತ್ (+91 9738931789) (+91-9152219751) & ಶ್ರೀ ರಾಜೇಂದ್ರ ದಹಿಯಾ (+91 8448264515), ಅವರನ್ನು ಸಂಪರ್ಕಿಸಬಹುದು. ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ಲಿಂಕ್ (http://www.kotak.com/en/bank-auctions.html .ಹಾಗೂ ಕೊಟಕ್ ಮಹೀಂದ್ರಾ ಬ್ಯಾಂಕ್ ಲಿಮಿಟೆಡ್‌ನ ವೆಬ್‌ಸೈಟ್ : www.kotak.com or https://bankauctions.in ಅನ್ನು ನೋಡಿ.

ಸ್ಥಳ : ಮಂಗಳೂರು, ದಿನಾಂಕ : 07.03.2024 ಅಧಿಕೃತ ಅಧಿಕಾರಿ, ಕೊಟಕ್ ಮಹೀಂದ್ರಾ ಬ್ಯಾಂಕ್ ಲಿಮಿಟೆಡ್.

kotak
ಕೊಟಕ್ ಮಹೀಂದ್ರಾ ಬ್ಯಾಂಕ್ ಲಿಮಿಟೆಡ್
ಆಸ್ತಿ ಮಾರಟಕ್ಕಾಗಿ ಆನ್‌ಲೈನ್ ಇ-ಹರಾಜು
ನೋಂದಾಯಿತ ಕಚೇರಿ : 27 ಬಿಕೆಸಿ, ಸಿ 27 ಜಿ-ಬ್ಲಾಕ್, ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಬಾಂದ್ರಾ (ಪೂರ್ವ) ಮುಂಬೈ, ಮಹಾರಾಷ್ಟ್ರ, ಪಿನ್ ಕೋಡ್–400 051.
ಶಾಖೆ ಕಚೇರಿ : ಕೊಟಕ್ ಮಹೀಂದ್ರಾ ಬ್ಯಾಂಕ್ ಲಿಮಿಟೆಡ್, ನಂ. 22, ಐಎನ್‌ಜಿ ವೈಶ್ಯ ಹೌಸ್, ಎಂ.ಜಿ. ರಸ್ತೆ ಬೆಂಗಳೂರು. 560001, ಕರ್ನಾಟಕ.

ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಮಾರಾಟ ಪ್ರಕಟಣೆ

ಆರ್ಥಿಕ ಸ್ವತ್ತಿನ ಭದ್ರತೆ ಮತ್ತು ಪುನರ್‌ನಿರ್ಮಾಣ ಮತ್ತು ಭದ್ರತಾ ಬಡ್ಡಿ ಕಾಯಿದೆ ಜಾರಿ, ೨೦೦೨ರ ಅಡಿಯಲ್ಲಿ ನಿಯಮ ೮ (೫) ಮತ್ತು ನಿಯಮ ೮(೬)ರ ಅಧಿ ನಿಯಮದ ನಿಬಂಧನೆಗಳನ್ನು ಓದಿಕೊಂಡಂತೆ ಭದ್ರತಾ ಬಡ್ಡಿ (ಜಾರಿ) ನಿಯಮ, ೨೦೦೨ರ ಅಡಿ ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಇ-ಹರಾಜು ಮಾರಾಟ ಪ್ರಕಟಣೆ.

kotak
ಕೊಟಕ್ ಮಹೀಂದ್ರಾ ಬ್ಯಾಂಕ್ ಲಿಮಿಟೆಡ್
ಆಸ್ತಿ ಮಾರಟಕ್ಕಾಗಿ ಆನ್‌ಲೈನ್ ಇ-ಹರಾಜು
ನೋಂದಾಯಿತ ಕಚೇರಿ : 27 ಬಿಕೆಸಿ, ಸಿ 27 ಜಿ-ಬ್ಲಾಕ್, ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಬಾಂದ್ರಾ (ಪೂರ್ವ) ಮುಂಬೈ, ಮಹಾರಾಷ್ಟ್ರ, ಪಿನ್ ಕೋಡ್ – 400 051.
ಶಾಖೆ ಕಚೇರಿ : ಕೊಟಕ್ ಮಹೀಂದ್ರಾ ಬ್ಯಾಂಕ್ ಲಿಮಿಟೆಡ್, ನಂ. 22, ಐಎನ್‌ಜಿ ವೈಶ್ಯ ಹೌಸ್, ಎಂ.ಜಿ. ರಸ್ತೆ ಬೆಂಗಳೂರು – 560001, ಕರ್ನಾಟಕ.

ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಮಾರಾಟ ಪ್ರಕಟಣೆ ಆರ್ಥಿಕ ಸ್ವತ್ತಿನ ಭದ್ರತೆ ಮತ್ತು ಪುನರ್‌ನಿರ್ಮಾಣ ಮತ್ತು ಭದ್ರತಾ ಬಡ್ಡಿ ಕಾಯಿದೆ ಜಾರಿ, ೨೦೦೨ರ ಅಡಿಯಲ್ಲಿ ನಿಯಮ ೮ (೫) ಮತ್ತು ನಿಯಮ ೮(೬)ರ ಅಧಿ ನಿಯಮದ ನಿಬಂಧನೆಗಳನ್ನು ಓದಿಕೊಂಡಂತೆ ಭದ್ರತಾ ಬಡ್ಡಿ (ಜಾರಿ) ನಿಯಮ, ೨೦೦೨ರ ಅಡಿ ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಇ-ಹರಾಜು ಮಾರಾಟ ಪ್ರಕಟಣೆ.

ಈ ಮೂಲಕ ಸಾರ್ವಜನಿಕರು ಮತ್ತು ನಿರ್ದಿಷ್ಟವಾಗಿ ಸಾಲಗಾರ (ರು) ಮತ್ತು ಜಾಮೀನುದಾರರಿಗೆ ಸೂಚಿಸುವುದು ಏನೆಂದರೆ ಕೆಳಗೆ ವಿವರಿಸಿದ ಸ್ಥಿರ ಆಸ್ತಿಯನ್ನು ಭದ್ರತಾ ಸಾಲಗಾರನಿಗೆ ಅಡಮಾನ ಮಾಡಲಾಗಿದ್ದು, ಅದನ್ನು ಫುಲ್ಲರ್‌ಟಾನ್ ಇಂಡಿಯಾ ಹೋಮ್ ಫೈನಾನ್ಸ್ ಲಿಮಿಟೆಡ್ (ಈ ನಂತರ ಎಫ್‌ಐಎಚ್‌ಎಫ್‌ಸಿ")ನ ಅಧಿಕೃತ ಅಧಿಕಾರಿಯು ಸ್ವಾಧೀನ ಪಡೆಸಿಕೊಂಡಿದ್ದು, ಕೊಟಕ್ ಮಹೀಂದ್ರಾ ಬ್ಯಾಂಕ್ ಲಿಮಿಟೆಡ್‌ದ ಸಾಲದ

kotak
Kotak Mahindra Bank
ಕೊಟಕ್ ಮಹೀಂದ್ರಾ ಬ್ಯಾಂಕ್ ಲಿಮಿಟೆಡ್
ನೋಂದಾಯಿತ ಕಚೇರಿ : 27 ಬಿಕೆಸಿ, ಸಿ 27 ಜಿ-ಬ್ಲಾಕ್, ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಬಾಂದ್ರಾ (ಪೂರ್ವ) ಮುಂಬೈ, ಮಹಾರಾಷ್ಟ್ರ, ಪಿನ್ ಕೋಡ್–400 051.
ಶಾಖೆ ಕಚೇರಿ : ಕೊಟಕ್ ಮಹೀಂದ್ರಾ ಬ್ಯಾಂಕ್ ಲಿಮಿಟೆಡ್, ನಂ. 22, ಐಎನ್‌ಜಿ ವೈಶ್ಯ ಹೌಸ್, ಎಂ.ಜಿ. ರಸ್ತೆ ಬೆಂಗಳೂರು. 560001, ಕರ್ನಾಟಕ.

ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಮಾರಾಟ ಪ್ರಕಟಣೆ

ಆರ್ಥಿಕ ಸ್ವತ್ತಿನ ಭದ್ರತೆ ಮತ್ತು ಪುನರ್‌ನಿರ್ಮಾಣ ಮತ್ತು ಭದ್ರತಾ ಬಡ್ಡಿ ಕಾಯಿದೆ ಜಾರಿ, ೨೦೦೨ರ ಅಡಿಯಲ್ಲಿ ನಿಯಮ ೮ (೫) ಮತ್ತು ನಿಯಮ ೮(೬)ರ ಅಧಿ ನಿಯಮದ ನಿಬಂಧನೆಗಳನ್ನು ಓದಿಕೊಂಡಂತೆ ಭದ್ರತಾ ಬಡ್ಡಿ (ಜಾರಿ) ನಿಯಮ, ೨೦೦೨ರ ಅಡಿ ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಇ-ಹರಾಜು ಮಾರಾಟ ಪ್ರಕಟಣೆ.

ಈ ಮೂಲಕ ಸಾರ್ವಜನಿಕರು ಮತ್ತು ನಿರ್ದಿಷ್ಟವಾಗಿ ಸಾಲಗಾರ (ರು) ಮತ್ತು ಜಾಮೀನುದಾರರಿಗೆ ಸೂಚಿಸುವುದು